**ದಿನಾಂಕಃ 15.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಎಸ್ ವಕೀಲರಿಂದಃ**

ನಾನು ಈ ದಾವೆಯನ್ನು ಸರ್ವೇ ನಂ.8/9 ಎ ಜಮೀನಿಗೆ ಸಲ್ಲಿಸಿರುತ್ತೇನೆ. ಸದರಿ ಸರ್ವೇ ನಂ.8/9 ಎ ನಲ್ಲಿ 27 ½ ಗುಂಟೆ ಜಮೀನು ಇರುತ್ತದೆ. ಸದರಿ ಸರ್ವೇ ನಂ.8/9 ಎ ಜಮೀನನ್ನು ಸರ್ವೇ ಇಲಾಖೆಯಿಂದ ಅಳತೆ ಮಾಡಿಸಿರುವುದಿಲ್ಲ. ನಿಪಿ-56 ರ ಭಾವಚಿತ್ರದಲ್ಲಿ ಬಲಭಾಗಕ್ಕೆ 6 ಮನೆಗಳು ಮತ್ತು ಎಡಭಾಗಕ್ಕೆ 7-8 ಮನೆಗಳು ಇವೆ ಎಂದರೆ ಸರಿಯಲ್ಲ. ಸದರಿ ನಿಪಿ-56 ರ ಭಾವ ಚಿತ್ರದಲ್ಲಿ ಕಾಣುವ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ ಎಂದರೆ ಸರಿಯಲ್ಲ. ನಿಪಿ-56 ರ ಭಾವಚಿತ್ರದಲ್ಲಿ ರಸ್ತೆ ಮತ್ತು ಗಲ್ಲಿ ಕಾಣುತ್ತಿದೆ ಎಂದರೆ ಸಾಕ್ಷಿದಾರರು ರಸ್ತೆ ಮಾತ್ರ ಇದೆ ಎಂದು ನುಡಿಯುತ್ತಾರೆ. ನಿಪಿ-40 ರಿಂದ 51, 54 ರಿಂದ 59 ರ ಭಾವಚಿತ್ರಗಳನ್ನು ಈ ದಾವೆಗಾಗಿ ಸೃಷ್ಟಿಸಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-56 ರ ಭಾವಚಿತ್ರದಲ್ಲಿ ಕಾಣುವ ಮನೆಗಳನ್ನು ನಿರ್ಮಿಸುವಾಗ ಸದರಿ ಮನೆಗಳನ್ನು ನಿರ್ಮಿಸದಂತೆ ತಡೆಯಲು ನಾನು ಪಂಚಾಯತಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ಸರ್ವೇ ನಂ.8/9 ಎ ನಲ್ಲಿ ನಮಗೆ ಸೇರಿದ ಯಾವುದೇ ಜಮೀನುಗಳು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.